ತೆರೆಯೋದು ಅಷ್ಟು ಸುಲಭದ ಮಾತಲ್ಲ. ಒಂದು ವೇಳೆ ಆತ ಒಳಗೆ ಇದ್ದದ್ದೇ ಆದರೆ ಹೊರಗೆ ಜಿಗಿದು ಓಡೋದು ಅಸಾಧ್ಯವಿತ್ತು' ಸೋಲು ಒಪ್ಪಿಕೊಳ್ಳದಂತೆ ನುಡಿದ.

'ಬೇಡ, ಪಿಸಿಯನ್ನೇ ಕರಿತೀನಿ' ಇನ್‌ಸ್ಪೆಕ್ಟರ್ ರಾಜಧಾನಿ ಪಿಸಿಯನ್ನು ಕರೆಯಲು ಅತ್ತ ನೋಡಿದ. ಸಾರಂಗ ಅಲ್ಲೆಲ್ಲೂ ಕಾಣಿಸಲಿಲ್ಲ!

* * *

ಪಿಸಿ ಸಾರಂಗ ರಸ್ತೆಯಿಂದ ಬಹಳಷ್ಟು ದೂರ ನಡೆದಿದ್ದ. ಅವನ ಕಣ್ಣುಗಳು ಅಪಾರ್ಟ್‌ಮೆಂಟ್‌ನ ಕಡೆಗಿದ್ದವು. ತನ್ನ ಅಧಿಕಾರಿ ರಸ್ತೆಯಂಚಿಗೆ ಬೈಕ್ ನಿಲ್ಲಿಸಿ ಇಳಿದಾಗ ಅವನು ಸ್ಪಷ್ಟವಾಗಿ ನೋಡಿದ್ದ. ಪಾಂಬುವಿನ ಕಾರಿನಿಂದ ಇಳಿದು ಅಪಾರ್ಟ್‌ಮೆಂಟ್‌ನ ಕಡೆಗೆ ಹೋದ ವ್ಯಕ್ತಿಗೂ, ತಾನು ಆತನ ಕಾರಿನಲ್ಲಿ ಕಂಡ ವ್ಯಕ್ತಿಗೂ ಹೋಲಿಕೆಯಿತ್ತು. ಅನುಮಾನವೊಂದು ಅವನ ತಲೆಯೊಳಗೆ ಹುಳು ಕೊರೆದಂತೆ ಕೊರೆಯುತ್ತಲೇ ಇತ್ತು. ಅದನ್ನು ಸಾಬೀತುಪಡಿಸಲು ಅವನು ತನ್ನ ಅಧಿಕಾರಿ ಮತ್ತು ಪಾಂಬುವಿನ ಸಂಭಾಷಣೆ ನಡೆಯುತ್ತಿರುವಂತೆಯೇ ಅವರ ಕಣ್ತಪ್ಪಿಸಿ ಬಂದಿದ್ದ. ದೂರದಲ್ಲಿ ನಿಂತಿದ್ದ ಇಬ್ಬರಿಗೂ ಇದು ಗಮನಕ್ಕೆ ಬರುವಂತಿರಲಿಲ್ಲ.

ಪಿಸಿ ಅಪಾರ್ಟ್‌ಮೆಂಟ್‌ನ ಮುಂದೆ ನಿಂತಾಗ ಸೆಕ್ಯುರಿಟಿಯಾತ ದಯಪಾಲಿಸಿದ. ಅವನದ್ದೂ ಅನುಮಾನದ ದೃಷ್ಟಿ. ಪಿಸಿಯನ್ನು ನೋಡುತ್ತಲೇ ಕೊನೆಗೆ ಮೆಟ್ಟಿಲೇರಿ ಹೋದ ವ್ಯಕ್ತಿಯನ್ನು ನೆನಪಿಸಿಕೊಂಡ. ಸೆಕ್ಯುರಿಟಿಯಾತನ ದೃಷ್ಟಿಯಲ್ಲಿ ಮೆಟ್ಟಿಲೇರಿ ಹೋದವನು ಬಹಳ ಸಾಧು ಮನುಷ್ಯ. ಅರೆ ಕ್ಷಣ ಪಿಸಿಯನ್ನು ಗಮನಿಸಿದವನೇ ತನಗೂ ಅದಕ್ಕೂ ಏನೂ ಸಂಬಂಧವಿಲ್ಲದವರಂತೆ ಹಿಂತಿರುಗಿದ. ಆಶಾಭಾವನೆಯಿಂದ ಬಂದಿದ್ದ ಸಾರಂಗನಿಗೆ ತನ್ನ ಅಧಿಕಾರಿನ್ನು ಮೆಚ್ಚಿಸಲೇಬೇಕೆನ್ನುವ ತುಡಿತವಿತ್ತು. ಅವನು ಹಿಂತಿರುಗಿದ ಸೆಕ್ಯುರಿಟಿಯವನನ್ನು ಕರೆದ.

'ಇಲ್ಲಿಯ ಸೆಕ್ಯುರಿಟಿ ನೀನೇ ತಾನೆ?'

ಸೆಕ್ಯುರಿಟಿಯಾತ ಆ ಮಾತಿಗೆ ಮೆಲ್ಲಗೆ ತಿರುಗಿದ; ಆವರೆಗೂ ಆತ ಪಿಸಿ ಸಾರಂಗನನ್ನು ಕಂಡಿಲ್ಲವೆನ್ನುವಂತೆ.

'ಬಾರಯ್ಯ ಇತ್ತ. ನಿನ್ನೇ ಕೇಳ್ತಾ ಇರೋದು' ಪೊಲೀಸ್ ದರ್ಪ ಅವನ ಮಾತಿನಲ್ಲಿತ್ತು.

ಅಲ್ಲಿಯವರೆಗೂ ಅಳುಕಿಲ್ಲದ ಸೆಕ್ಯುರಿಟಿಯಾತನ ಎದೆ ಝಲ್ಲೆಂದಿತು. ಅವನು ಅದನ್ನು ತೋರಿಸಿಕೊಳ್ಳದೆ ಪಿಸಿಯ ಹತ್ತಿರ ಬಂದ. ವಿನಮ್ರತೆಯಿಂದ ತಲೆ ಬಾಗಿಸಿ ನಿಂತಂತೆ ಅವನ ಮುಂದೆ ನಿಂತ.

'ಸಾರ್, ನಾನೇ... ನಾನೇ ಇಲ್ಲಿಯ ರಾತ್ರಿ ಪಾಳಿಯ ಸೆಕ್ಯುರಿಟಿ'

ಪೊಲೀಸ್ ಅಧಿಕಾರಿಯ ಸಹಾಯಕನ ದರ್ಪ ಅದೇ ರೀತಿಯಲ್ಲಿ ಮುಂದುವರಿಯಿತು.

'ನಿನ್ನಿಂದ ನನಗೆ ಕೆಲವೊಂದು ಮಾಹಿತಿಗಳು ಬೇಕು. ಮುಚ್ಚು ಮರೆಯಿಲ್ಲದೆ ಉತ್ತರಿಸ್ಬೇಕು ನೀನು' ಅಣತಿಯಿತ್ತು ಪೊಲೀಸ್ ಸಹಾಯಕನ ಮಾತಿನಲ್ಲಿ.

'ಸಾರ್, ಹೇಳ್ತೀನಿ' ಅಳುಕು ಸ್ಪಷ್ಟವಾಗಿತ್ತು ಸೆಕ್ಯುರಿಟಿಯಾತನ ದನಿಯಲ್ಲಿ. ತನ್ನ ಒಡೆಯರುಗಳಿಗೆ ವಿಧೇಯಕನಾಗಿರಬೇಕಾದ ಸಂದರ್ಭದಲ್ಲಿ ಪೊಲೀಸ್ ಕೇಳುವ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಲು ತನ್ನಿಂದ ಸಾಧ್ಯವೇ? ಯೋಚನೆಗಿಟ್ಟುಕೊಂಡಿತು ಪಿಸಿಯ ಮಾತುಗಳು.

'ಈಗ, ಅಂದ್ರೆ ಅರ್ಧ ಗಂಟೆ ಮುಂಚೆ ಈ ಅಪಾರ್ಟ್‌ಮೆಂಟ್‌ಗೆ ಬಂದೋನು ಯಾರು?' ತಾನು ಅದನ್ನು ಗುರುತಿಸಿ, ನಿಖರವಾಗಿ ಕೇಳುತ್ತಿದ್ದೇನೆ ಅನ್ನುವಂತೆ ಅವನನ್ನು ಪ್ರಶ್ನಿಸಿದ ಪಿಸಿ ಸಾರಂಗ.

'ಸಾರ್, ಇಲ್ಲಿ ಹದಿನಾರು ಮನೆಗಳಿವೆ ಸಾರ್. ಯಾವ್ಯಾವ ಮನೆಯೋರು ಯಾವ್ಯಾವಾಗ ಬರ್ತಾರೋ ನಂಗೆ ಗೊತ್ತಾಗೊಲ್ಲ, ಸಾರ್...' ರಾಗವೆಳೆದು ಹಾರಿಕೆಯ ಉತ್ತರವಿತ್ತ ರಾತ್ರಿ ಪಾಳಿಯ ಸೆಕ್ಯುರಿಟಿಯಾತ.

'ನೋಡು, ಅನಗತ್ಯ ಬುದ್ಧಿವಂತಿಕೆಯನ್ನು ತೋರಿಸ್ಬೇಡ. ನಾನು ಕೇಳ್ತಾ ಇರೋ ಪ್ರಶ್ನೆಗೆ ಸಮಂಜಸ ಉತ್ತರ ಕೊಡು' ಅಸಹನೆ ಅವನ ಮಾತಿನಲ್ಲಿತ್ತು. ಸೆಕ್ಯುರಿಟಿಯಾತ ಅಡಕತ್ತರಿಯಲ್ಲಿ ಸಿಕ್ಕವರಂತೆ ಮುಖ ಕಿವುಚಿದ.

'ಸಾರ್, ನಂಗೆ ಗೊತ್ತಿರೋ ವಿಷಯಾನ ಹೇಳ್ತೀನಿ. ಮಕ್ಕಳು, ದೊಡ್ಡವರೂಂತ ಜನ ಇಲ್ಲಿ ಹರಿದಾಡ್ತಾ ಇರ್ತಾರೆ. ನಾನು ಯಾರನ್ನು ನೆನಪಿನಲ್ಲಿಟ್ಟುಕೊಳ್ಳಲಿ?' ತನ್ನ ಮಾತನ್ನು ಸಮರ್ಥಿಸಿಕೊಳ್ಳುವಂತೆ ಹೇಳಿದ.

'ಸರಿ, ಹಾಗಾದರೆ ಇಲ್ಲಿಗೆ ಅಪರಿಚಿತರು ಬಂದಾಗ ನೀನು ಏನು ಮಾಡುವೆ?' ಬುದ್ಧಿವಂತಿಕೆಯ ಪ್ರಶ್ನೆ ಹಾಕಿ ಅವನನ್ನು ತಬ್ಬಿಬ್ಬುಗೊಳಿಸಿದ.

'ಇಲ್ಲಿಯ ಮಂದಿ ಯಾರು ಅನ್ನೋದು ನನಗೆ ಚೆನ್ನಾಗಿ ಗೊತ್ತಿದೆ. ಹೊರಗಿನೋರು ಬಂದ್ರೆ ವಿಚಾರಿಸಿ, ಇಲ್ಲಿಯ ರಿಜಿಸ್ಟ್ರರ್ ಪುಸ್ತಕದಲ್ಲಿ ಬರೀತೀನಿ'

'ಹಾಗಾದರೆ ಈಗ ಬಂದೋನು ಇಲ್ಲಿಯವನೇ ಅಂದ ಹಾಗಾಯ್ತು. ಯಾಕಂದ್ರೆ ಆತ ನಿನ್ನ ಪುಸ್ತಕದಲ್ಲಿ ಏನೂ ಬರೆದಿಲ್ಲ, ಅಲ್ವಾ?'

ಪಿಸಿಯ ಮಾತಿಗೆ ಉಗುಳು ನುಂಗಿಕೊಂಡ ಸೆಕ್ಯುರಿಟಿಯಾತ.

'ಇಲ್ಲ'

'ಹಾಗಾದರೆ ಈಗ ಬಂದೋನು ನಿನಗೆ ಪರಿಚಿತನಲ್ವೆ?'

ಕ್ಷಣ ಹೊತ್ತು ಮೌನ ನೆಲಸಿತು. ಸೆಕ್ಯುರಿಟಿಯಾತ ಪಿಸಿಯನ್ನು ಗಮನಿಸಿದ. ಉತ್ತರ ಹೇಳದಿದ್ದರೆ ಮುಂದಿನ ಪರಿಣಾಮ ಚೆನ್ನಾಗಿಲ್ಲವೆನ್ನುವುದು ಗೊತ್ತು. ಹಾಗಾಗಿ ಏನಾದರೊಂದು ಸಬೂಬು ನೀಡಬೇಕೆನಿಸಿತು.

'ಪರಿಚಿತನಲ್ಲ, ಆದ್ರೆ ಇಲ್ಲಿಯ ಮನೆಗೆ ಆಗಾಗ ಬರ್ತಾ ಇರ್ತಾನೆ ಅನ್ನೋದು ಗೊತ್ತು'

'ಯಾವ ಮನೆಗೆ?'

'ಗೊತ್ತಿಲ್ಲ'

'ಸುಮ್ನೆ ಸಮಯ ಹಾಳು ಮಾಡಬೇಡ. ನಾನು ಆ ಕೆಲಸ ಮಾಡೋ ಮೊದಲು ನನಗೆ ಮಾಹಿತಿ ಕೊಡು' ತಾಳ್ಮೆಯಿಂದ ಹೇಳಿದ ಪಿಸಿ.

'ಅದೇನೋ, ಯಾರ ಮನೆಯೋ ಗೊತ್ತಿಲ್ಲ. ಬಹಳ ಹಿಂದೆಯೂ ಇಲ್ಲಿಗೆ ಬರ್ತಿದ್ದ. ಆಗ ಅವನ ಜೊತೆಗೆ ಒಂದು ಹೆಣ್ಣೂ ಬರ್ತಿತ್ತು'

ಪೊಲೀಸ್ ಸಹಾಯಕನ ಕಣ್ಣುಗಳು ಗೋಲಿಯಾಕಾರಕ್ಕೆ ತಿರುಗಿದವು. ಸೆಕ್ಯುರಿಟಿಯಾತ ಹೇಳುತ್ತಿರುವುದು ತಮಗೆ ಅಗತ್ಯವಾಗಿ ಬೇಕಾಗಿದ್ದ ಹುಡುಗನ ಬಗ್ಗೆಯೆ. ಸ್ಪಷ್ಟವಾಯಿತು ಅವನ ವಿವರಣೆಯಿಂದ. ಕುತೂಹಲ ಮೂಡಿತು. ಸೆಕ್ಯುರಿಟಿಯಾತನನ್ನು ತಳ್ಳಿಕೊಂಡಂತೆ ಮುಂದೆ ನಡೆದು ಅಲ್ಲಿಯೇ ಪಕ್ಕದಲ್ಲಿದ್ದ ಮುರುಕಲು ಪ್ಲಾಸ್ಟಿಕ್ ಚೇರ್‌ನ ಮೇಲೆ ತನ್ನ ಕೈಯಲ್ಲಿದ್ದ ಕೋಲು ಮತ್ತು ಟೋಪಿಯನ್ನು ಇರಿಸಿ, ಬೆಲ್ಟ್ ಹಿಡಿದು ಪ್ಯಾಂಟನ್ನು ಮೇಲಕ್ಕೇರಿಸಿದ. ಅವನ ಮುಖದಲ್ಲಿ ಗೆಲುವಿನ ಛಾಯೆ ದಟ್ಟವಾಗಿತ್ತು.

'ಈಗ ಹೇಳು, ನಿನ್ನ ಹೆಸರೇನೆಂದೆ?'

ಅವನ ಪ್ರಶ್ನೆ ತಿರುವು ಪಡೆದಾಗ ಸೆಕ್ಯುರಿಟಿಯಾತ ನಿಟ್ಟುಸಿರಿಟ್ಟು ಒಂದೇ ಉಸುರಿಗೆ ಹೇಳಿದ.

'ಪರಂದಪ'

'ಅಂದ್ರೆ, ಏನರ್ಥ?'

'ಗೊತ್ತಿಲ್ಲ, ನನ್ನ ತಂದೆ ತಾಯಿಯನ್ನು ಕೇಳ್ಬೇಕು' ಮುಗ್ಧತೆಯಿತ್ತು ಮಾತಿನಲ್ಲಿ.

'ನಂಗನಿಸುತ್ತೆ, ಅದರ ಅರ್ಥ ಪರ ಇಲ್ಲದವನು. ಅಂದ್ರೆ, ಅರಿವಿಲ್ಲದವನು ಅಂತಲೇ' ತಮಾಷೆಯಿತ್ತು ಪೊಲೀಸ್ ಸಹಾಯಕನ ದನಿಯಲ್ಲಿ.

'ಗೊತ್ತಿಲ್ಲ ಸಾರ್. ನೀವು ತಿಳ್ಕೊಂಡೋರು. ಏನು ಅರ್ಥನೋ ನೀವೇ ಹೇಳ್ಬೇಕು. ಈವರೆಗೂ ನಂಗೆ ಅದರ ಅಗತ್ಯ ಬಿದ್ದಿಲ್ಲ' ಈಗಲೂ ಅದೇ ಮುಗ್ಧತೆ ಅವನ ಮಾತುಗಳಲ್ಲಿಯೂ.

'ಪಿಸಿ' ಅವನ ಮಾತಿಗೆ ತಡೆಯೊಡ್ಡುವಂತೆ ಇನ್‌ಸ್ಪೆಕ್ಟರ್ ರಾಜಧಾನಿಯ ದನಿ ಕೇಳಿತು. ಪಿಸಿ ಮಾತು ಮುಗಿಸಿದ.

'ನಿನ್ನನ್ನ ಮತ್ತೆ ಭೇಟಿಯಾಗ್ತೀನಿ' ವಿಷಯ ಬಿಟ್ಟು ಕೊಡದವರಂತೆ ಸರ ಸರನೆ ನಡೆದು ಇನ್‌ಸ್ಪೆಕ್ಟರ್‌ನ ಹತ್ತಿರ ಬಂದ.

'ಏನು ಮಾಡ್ತಾ ಇದ್ದೆ?'

'ಸಾರ್, ಅದು ಒಂದು ಸಣ್ಣ ಎಳೆ ಹಿಡಿದು ಹೋಗ್ತಾ ಇದ್ದೆ'

'ಯಾವ ಎಳೆ?'

'ಲಹರಿ ಕೇಸ್‌ನ ಬಗ್ಗೆ'

ಇನ್‌ಸ್ಪೆಕ್ಟರ್‌ನ ಮುಖ ಕುಗ್ಗಿತು. ಪಾಂಬುವನ್ನು ಕಳುಹಿಸಿ ಬಂದ ಅವನ ಯೋಚನೆ ಬೇರೊಂದು ದಾರಿಯಲ್ಲಿ ಹೊರಳಿತು.

* * *

**(ಸಶೇಷ)**